ಸಂಪುಟ : 41 ಸಂಚಿಕೆ :13 ಫೋನ್ : 0816-2278198 | 2257588 | ಫ್ಯಾಕ್ಸ್ : 2273793 14 ಫೆಬ್ರುವರಿ 2018 ಬುಧವಾರ POST REG NO . L-2/RNP- 364/TMR/2018-20 ಪುಟಗಳು : 08 ಬೆಲೆ ₹ 2.00

ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ

ತುಮಕೂರು | ಚಿತ್ರದುರ್ಗ | ದಾವಣಗೆರೆ | ಹಾವೇರಿ | ಬಳ್ಳಾರಿ ಜಿಲ್ಲೆಗಳ ಪ್ರಾದೇಶಿಕ ದಿನಪತ್ರಿಕೆ

# ಪ್ರಜಾ ಪ್ರಗತಿ

ಉಪ ಸಂಪಾದಕರು : ಟಿ.ಎನ್.ಮಧುಕರ್ ಸಂಪಾದಕರು : ಎಸ್. ನಾಗಣ್ಣ

E-mail : For News: prajapragathi1@gmail.com
For Advertisements: prajapragathiadds@gmail.com
Web : prajapragathi.com



ಕೇರಳದ ಕೊಚ್ಚಿ ಶಿಪ್ ಯಾರ್ಡ್‌ನಲ್ಲಿ ಸ್ಫೋಟ: 5 ಮಂದಿ ಸಾವು



ನಿರಂತರ ದ್ವಿಪಕ್ಷೀಯ ಮಾತು ಕತೆಯಿಂದ ಮಾತ್ರ ಭಾರತ-ಪಾಕಿಸ್ತಾನಗಳ ನಡುವಿನ ಸಮಸ್ಯೆ ಇತ್ಯರ್ಥ: ಮಣಿಶಂಕರ್ ಅಯ್ಯರ್



ಮೊಣಕಾಲಿನ ಗಾಯದ ಸಮಸ್ಯೆಯಿಂದ ಕಾಮನ್ ವೆಲ್ತ್ ಗೇಮ್ಸ್ ನಿಂದ ಹೊರಗುಳಿದ ಜಿಮ್ನಾಸ್ಟಿಕ್ ತಾರೆ ದೀಪಾ ಕರ್ಮಾಕರ್



ಆತಿಥೇಯ ದಕ್ಷಿಣ ಆಫ್ರಿಕಾ ವಿರುದ್ಧ ಭರ್ಜರಿ ಶತಕ ಸಿಡಿಸಿದ ಟೀಂ ಇಂಡಿಯಾದ ರೋಹಿತ್ ಶರ್ಮಾ

### ವೆಂಕೋಬ್ ಕೋಳಿ ಧಾರಣೆ

ಫಾರಂ ಕೋಳಿ 1 ಕೆಜಿಗೆ ರೂ.64/-
ರಿಟೈಲ್ ಮಾರಾಟದ ದರ ಕೆ.ಜಿ.ಗೆ ರೂ. 92/-

| ವಿತ್‌ಸ್ಕಿನ್ | ವಿತೌಟ್ ಸ್ಕಿನ್ |
|---|---|
| ರೂ.133/- | ರೂ.152/- |

ಡಜನ್ ಮೊಟ್ಟೆಗೆ ರೂ.50/-

### ಬೋಫೋರ್ಸ್ ಹಗರಣ ಹಿಂದೆ ಸರಿದ ನ್ಯಾಯಮೂರ್ತಿ

ನವದೆಹಲಿ

64 ಕೋಟಿ ರೂ. ಮೊತ್ತದ ಬೋಫೋರ್ಸ್ ಹಗರಣದ ವಿಚಾರಣೆ ನಡೆಸುತ್ತಿದ್ದ ಮುಖ್ಯ ನ್ಯಾಯಮೂರ್ತಿ ದೀಪಕ್ ಮಿಶ್ರಾ ನೇತೃತ್ವದ ಪೀಠದ ಸದಸ್ಯರಾದ ಎ.ಎಂ.ಖಾನ್ವಿಲ್ಕರ್ ಸ್ವಯಂ ಪ್ರೇರಣೆಯಿಂದ ಹಿಂದೆ ಸರಿದಿದ್ದಾರೆ. ಮಾರ್ಚ್ 28ಕ್ಕೆ ಹೊಸದಾಗಿ ರಚನೆಯಾದ ನ್ಯಾಯಪೀಠವು ಬೋಫೋರ್ಸ್ ಹಗರಣ ವಿಚಾರಣೆ ಮುಂದುವರೆಸಲಿದೆ ಎಂದು ಇನ್ನೋರ್ವ ಸದಸ್ಯರಾದ ನ್ಯಾಯಮೂರ್ತಿ ಚಂದ್ರಚೂಡಾ ಹೇಳಿದ್ದಾರೆ. 2005 ರಲ್ಲಿ ದೆಹಲಿ ಹೈಕೋರ್ಟ್ ನೀಡಿದ್ದ ತೀರ್ಪನ್ನು ಪ್ರಶ್ನಿಸಿ ಬಿಜೆಪಿ ನಾಯಕ ಅಜೆಯ್ ಅಗರ್‌ವಾಲ್ ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ದೆಹಲಿ ಹೈಕೋರ್ಟ್ ಆರೋಪಿಗಳ ವಿರುದ್ಧದ ಆರೋಪಗಳನ್ನು ತಳ್ಳಿ ಹಾಕಿತ್ತು.

### ನಕ್ಸಲರ ಬಂಧನ

ರಾಯಪುರ

ದಂಗೆಪೀಡಿತ ಕೊಡಗಾಂ ಜಿಲ್ಲೆಯಲ್ಲಿ ಮೂವರು ನಕ್ಸಲರನ್ನು ಬಂಧಿಸಲಾಗಿದೆ. ಇವರಲ್ಲಿ ಓರ್ವ ನಕ್ಸಲನ ತಲೆಗೆ ಬಹುಮಾನ ಘೋಷಿಸಲಾಗಿತ್ತು.

### ಬಾಂಬ್ ಸ್ಫೋಟದಲ್ಲಿ ಯೋಧ ಹುತಾತ್ಮ

ದಾವಣಗೆರೆ

ಇತ್ತೀಚೆಗೆ ರಾಜಸ್ತಾನದ ಪೋಕ್ರಾನ್‌ನಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ ದಾವಣಗೆರೆ ಜಿಲ್ಲೆ ಹರಿಹರದ ಯೋಧ ಜಾವಿದ್ ಹುತಾತ್ಮರಾಗಿದ್ದಾರೆ. ಹುತಾತ್ಮ ಯೋಧ ಹರಿಹರ ಪಟ್ಟಣದ ಪಿ.ಬಿ.ರಸ್ತೆಯ ನಿವಾಸಿ. ಜಾವಿದ್ 14 ವರ್ಷಗಳಿಂದ ಭಾರತೀಯ ಸೇನೆಯಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

### ರೈಲು ಅಪಘಾತ ತಪ್ಪಿಸಿದ ಸಿಬ್ಬಂದಿ

ಕಟಿಹಾರ್: ಬಿಹಾರದ ಕಟಿಹಾರ್ ಜಿಲ್ಲೆಯಲ್ಲಿ ರೈಲು ಹಳಿ ತುಂಡಾಗಿರುವುದನ್ನು ರೈಲ್ವೆ ಸಿಬ್ಬಂದಿಯೊಬ್ಬರು ಪೈಲೆಟ್ ಗಮನಕ್ಕೆ ತರುವ ಮೂಲಕ ಸಂಭವಿಸಬಹುದಾಗಿದ್ದ ಭಾರೀ ಅನಾಹುತ ತಪ್ಪಿಸಿದ್ದಾರೆ.

## ಸವಿತಾ ಮಹರ್ಷಿ ಜಯಂತೋತ್ಸವದಲ್ಲಿ ಶಾಸಕ ಡಾ.ಎಸ್ಸೆಸ್ ಭರವಸೆ

# ಭೋಜನಾಲಯ ನಿರ್ಮಾಣಕ್ಕೆ ವೈಯಕ್ತಿಕ ನೆರವು

ದಾವಣಗೆರೆ

ಸವಿತಾ ಮಹರ್ಷಿ ಸಮುದಾಯ ಭವನದಲ್ಲಿ ವೈಯಕ್ತಿಕ ನೆರವಿನಲ್ಲಿ ಭೋಜನಾಲಯ ನಿರ್ಮಿಸಿಕೊಡುವುದಾಗಿ ಶಾಸಕ ಡಾ.ಶಾಮನೂರು ಶಿವಶಂಕರಪ್ಪ ಭರವಸೆ ನೀಡಿದರು.

ನಗರದ ಕೊಂಡಜ್ಜಿ ರಸ್ತೆಯಲ್ಲಿರುವ ಶ್ರೀಮಾರುತಿ ಮಂದಿರದಲ್ಲಿ ಮಂಗಳವಾರ ಸವಿತಾ ಸಮಾಜ ಸಂಘದ ವತಿಯಿಂದ ಏರ್ಪಡಿಸಿದ್ದ ಶ್ರೀಸವಿತಾ ಮಹರ್ಷಿ ಜಯಂತೋತ್ಸವ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಸವಿತಾ ಸಮಾಜಬಾಂಧವರ ಬೇಡಿಕೆಯಂತೆ ಕೊಂಡಜ್ಜಿ ರಸ್ತೆಯಲ್ಲಿ ನಿರ್ಮಾಣವಾಗುತ್ತಿರುವ ಸವಿತಾ ಮಹರ್ಷಿ ಸಮುದಾಯ ಭವನದಲ್ಲಿ ತಮ್ಮ ವೈಯಕ್ತಿ ವೆಚ್ಚದಲ್ಲಿ ಭೋಜನಾಲಯ ನಿರ್ಮಿಸಿಕೊಡುತ್ತೇನೆ ಎಂದು ಹೇಳಿದರು.

ನಾನು ನಗರಸಭೆ ಅಧ್ಯಕ್ಷನಾಗಿದ್ದ ಸಂದರ್ಭದಲ್ಲಿ ಸವಿತ ಸಮಾಜದ ಸಮುದಾಯ ಭವನ ನಿರ್ಮಾಣಕ್ಕಾಗಿ ರೂಪಾಯಿಗೆ ಚದರ ಅಡಿಯಂತೆ ನಿವೇಶನ ಕೊಡಿಸಿದ್ದೆ. ಈಗ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ಮೇಲೆ ಸಮುದಾಯ ಭವನ ನಿರ್ಮಾಣಕ್ಕಾಗಿ 50 ಲಕ್ಷ ರೂ. ಅನುದಾನ ಕೊಡಿಸಿದ್ದೇನೆ. ಆದರೆ, ಈಗ ಮತ್ತೆ ಸಮಾಜದವರು ಭೋಜನಾಲಯ ನಿರ್ಮಾಣಕ್ಕೆ ಹೆಚ್ಚುವರಿ ಅನುದಾನ





ಕೊಡುವಂತೆ ಬೇಡಿಕೆ ಸಲ್ಲಿಸಿದ್ದಾರೆ. ಆದ್ದರಿಮದ ತಮ್ಮ ವೈಯಕ್ತಿಕ ಖರ್ಚಿನಲ್ಲಿಯೇ ಅಡುಗೆ ಮನೆ ನಿರ್ಮಿಸಿಕೊಡುತ್ತೇನೆಂದು ವಾಗ್ದಾನ ಮಾಡಿದರು.

ಹಿಂದೆ ಸವಿತಾ ಸಮಾಜ ಬಹಳಷ್ಟು ಹಿಂದೆ ಉಳಿದಿತ್ತು. ಆ ಸಂದರ್ಭದಲ್ಲಿ ಸವಿತಾ ಸಮಾಜದವರು ಮನೆ, ಮನೆಗೆ ಹೋಗಿ ಅವರ ಕುಲ ಕಸುಬಾಗಿರುವ ಕ್ಷೌರಿಕ ವೃತ್ತಿಯನ್ನು ಮಾಡುತ್ತಿದ್ದರು. ಆದರೆ, ಈಗ ಸಮಾಜ ಸಾಕಷ್ಟು ಅಭಿವೃದ್ಧಿ ಹೊಂದಿದ್ದು, ಆಧುನಿಕತೆಗೆ ತಕ್ಕಂತೆ ಶೆಲ್ಯೂನ್ ಶಾಪ್‌ಗಳನ್ನು ತೆರೆದಿರುವುದು ಒಳ್ಳೆಯ ಬೆಳವಣಿಗೆಯಾಗಿದೆ. ಸವಿತಾ ಸಮಾಜದ ಅಭಿವೃದ್ಧಿಗಾಗಿ ನಮ್ಮ ಸರ್ಕಾರ ಯೋಜನೆಗಳನ್ನು ಜಾರಿಗೆ ತಂದಿದ್ದು, ಇದರ ಸದುಪಯೋಗ ಪಡೆದುಕೊಂಡು ಅಭಿವೃದ್ಧಿ ಹೊಂದಬೇಕೆಂದು ಕಿವಿಮಾತು ಹೇಳಿದರು.

ಮಕ್ಕಳಿಂದಲೂ ನಿಮ್ಮ ಕುಲ ಕಸುಬು ಮಾಡಿಸಿ, ಅವರ ಭವಿಷ್ಯವನ್ನು ಹಾಳು ಮಾಡಬೇಡಿ. ಯಾವುದೇ ಸಮಾಜ ಅಭಿವೃದ್ಧಿ ಹೊಂದಬೇಕಾದರೆ, ಶಿಕ್ಷಣ ಅತ್ಯವಶ್ಯವಾಗಿದೆ. ಆದ್ದರಿಂದ ಮಕ್ಕಳಿಗೆ ಕಡ್ಡಾಯವಾಗಿ ಶಿಕ್ಷಣ ಕೊಡಿಸಿ, ಸುಶಿಕ್ಷಿತರನ್ನಾಗಿ ರೂಪಿಸಿ, ಅವರಿಗೂ ಉತ್ತಮ ಬದುಕು ಕಟ್ಟಿಕೊಡಿ ಎಂದು ಸಲಹೆ ನೀಡಿದರು.

ನಗರಸಭಾ ಮಾಜಿ ಅಧ್ಯಕ್ಷ ಬಿ.ವೀರಣ್ಣ ಮಾತನಾಡಿ, ಸವಿತಾ ಸಮಾಜದ ಅಭಿವೃದ್ಧಿಗೆ ಯಾವ ಪಕ್ಷ ಮತ್ತು ಸರ್ಕಾರ ಯಾವ್ಯಾವ ಕೊಡುಗೆಗಳನ್ನು ನೀಡಿದೆ ಎಂಬುದು ಗೊತ್ತಿದೆ. ಆದ್ದರಿಂದ ನಿಮ್ಮ ಸಮಾಜದ ಅಭಿವೃದ್ಧಿಗಾಗಿ ಶ್ರಮಿಸಿದವರ ಕೈ ಬಲಪಡಿಸಬೇಕೆಂದು ಮನವಿ ಮಾಡಿದರು.

ಸವಿತಾ ಸಮಾಜದ ಅಧ್ಯಕ್ಷ ಎನ್. ರಂಗಸ್ವಾಮಿ ಮಾತನಾಡಿ, ನಗರದಲ್ಲಿ 8 ಸಾವಿರ ಜನಸಂಖ್ಯೆ

>>> 2 ನೇ ಪುಟಕ್ಕೆ

> ನಾನು ನಗರಸಭೆ ಅಧ್ಯಕ್ಷನಾಗಿದ್ದಾಗ ಹಾಗೂ ನನ್ನ ಪತ್ನಿ ಈಗ ಪಾಲಿಕೆ ಸದಸ್ಯೆಯಾಗಿರುವ ಸಂದರ್ಭದಲ್ಲಿ ಈ ವಾರ್ಡಿನ ಅಭಿವೃದ್ಧಿಗೆ ಸಾಕಷ್ಟು ಶ್ರಮಿಸಿದ್ದೇನೆ ಹಾಗೂ ಈಗ ಅಭಿವೃದ್ಧಿಗೂ ಪ್ರಯತ್ನಿಸುತ್ತಿದ್ದೇವೆ. ಆದರೆ, ಬಿಜೆಪಿ ಜಿಲ್ಲಾಧ್ಯಕ್ಷರು ನಾವು ಏನೂ ಮಾಡಿಲ್ಲ ಎಂಬಂತೆ ಮಾತನಾಡುತ್ತಿದ್ದಾರೆ. ನಮ್ಮ ಅಭಿವೃದ್ಧಿ ಕಾರ್ಯಗಳ ಬಗ್ಗೆ ಬಹಿರಂಗವಾಗಿ ಚರ್ಚಿಸಲು ಹೊಂಡದ ವೃತ್ತಕ್ಕೆ ಬರಲಿ.
>
> ■ ಬಿ.ವೀರಣ್ಣ
> ನಗರಸಭಾ ಮಾಜಿ ಅಧ್ಯಕ್ಷ.

## ಫೆ.17 ಜೆಡಿಎಸ್ ಬೃಹತ್ ಸಮಾವೇಶದಲ್ಲಿ

# ಮೊದಲ ಹಂತದ ಪಟ್ಟಿ ಬಿಡುಗಡೆ

ಬೆಂಗಳೂರು

ಈ ತಿಂಗಳ 17 ರಂದು ನಗರದಲ್ಲಿ ಬೃಹತ್ ಸಮಾವೇಶ ಆಯೋಜಿಸುತ್ತಿದ್ದು, ಅಂದು ಮುಂದಿನ ಚುನಾವಣೆಗೆ ಸ್ಪರ್ಧಿಸಲಿರುವ ಮೊದಲ ಹಂತದಲ್ಲಿ 140 ಅಭ್ಯರ್ಥಿಗಳ ಪಟ್ಟಿ ಬಿಡುಗಡೆ ಮಾಡುವುದಾಗಿ ಜೆಡಿಎಸ್ ರಾಜ್ಯಾಧ್ಯಕ್ಷ ಎಚ್ .ಡಿ. ಕುಮಾರ ಸ್ವಾಮಿ ಇಂದಿಲ್ಲಿ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಬೆಂಗಳೂರಿನ ಹೊರ ವಲಯದ ಯಲಹಂಕದ ಬಳಿ ಕಾರ್ಯಕ್ರಮ ಆಯೋಜಿಸಿದ್ದೇವೆ. ನಗರದ ಜನತೆಗೆ ಟ್ರಾಫಿಕ್ ಜಾಮ್ ತೊಂದರೆ ಕೊಡಬಾರದೆಂದು ಯಲಹಂಕದ ಬಳಿ ಸಮಾವೇಶ ಮಾಡುತ್ತಿರುವುದಾಗಿ ತಿಳಿಸಿದರು.

ಮೊದಲ ಪಟ್ಟಿಯಲ್ಲಿ ಎಲ್ಲಾ ಹಾಲಿ ಶಾಸಕರಿಗೆ ಟಿಕೇಟ್ ನೀಡಬೇಕೆಂದು ನನ್ನ ಇಚ್ಛೆ. ಆದರೆ ಕೆಲವು ಶಾಸಕರು ವೈಯಕ್ತಿಕ ಕಾರಣದಿಂದ ಈ ಬಾರಿ ಚುನಾವಣೆಗೆ ಸ್ಪರ್ಧಿಸುವುದಿಲ್ಲ ಎಂದು ಹೇಳುತ್ತಿದ್ದಾರೆ. ಆದರೆ ಎಲ್ಲರಿಗೂ ಟಿಕೇಟ್ ನೀಡಬೇಕೆಂಬುದು ತಮ್ಮ ಇಚ್ಛೆ ಎಂದರು.

ಬಿಎಸ್ಪಿ ಜೊತೆ ಮೈತ್ರಿ ಮಾಡಿಕೊಳ್ಳಲಾಗಿದೆ. ಆದರೆ ಬಿಎಸ್ಪಿ ಕಳೆದ ಬಾರಿ ಒಂದು ಸ್ಥಾನ ಕೂಡ ಗೆದ್ದಿಲ್ಲ, ಆದರೆ ಬಿಎಸ್ಪಿ ಸ್ಪರ್ಧೆಯಿಂದ ಕಾಂಗ್ರೆಸ್‌ಗೆ ಹಿನ್ನೆಡೆಯಾಗಿದೆ. ಎಡಪಕ್ಷಗಳು, ರೈತ ಸಂಘಟನೆಗಳು ಚುನಾವಣೆಗೆ ಸ್ಪರ್ಧೆ ಮಾಡಲು ಮುಂದಾಗಿದೆ. ಹೀಗಾಗಿ ಸಣ್ಣಪುಟ್ಟ ಪಕ್ಷಗಳೊಂದಿಗೆ ಮೈತ್ರಿ ಮಾಡಿಕೊಳ್ಳುವ ಬಗ್ಗೆ ಚಿಂತನೆ ಇದೆ ಎಂದರು.

ಬಿಎಸ್‌ಪಿ ಜತೆ ಮೈತ್ರಿ ಮಾಡಿಕೊಂಡಿರುವುದು ಕಾಂಗ್ರೆಸ್ ವಿರುದ್ಧದ ರಣತಂತ್ರ ರೂಪಿಸುವ ಉದ್ದೇಶದಿಂದ ಅಲ್ಲ. ನಮ್ಮ ಅವರ ಶಕ್ತಿ ಪರಸ್ಪರ ಬಳಸಿ ಬಿಎಸ್‌ಪಿ 20 ಕ್ಷೇತ್ರಗಳಲ್ಲಿ ಗೆಲ್ಲಿಸುವಂತೆ ಮಾಡುತ್ತೇವೆ ಎಂದು ಹೇಳಿದರು.

ಬಿಎಸ್ಪಿ ಜೆಡಿಎಸ್ ಮೈತ್ರಿ ರಾಷ್ಟ್ರ ರಾಜಕೀಯದ ಬೆಳವಣಿಗೆಗೆ ನಾಂದಿ ಹಾಡಲಿದೆ. ಪ್ರಾದೇಶಿಕ ಪಕ್ಷ ಸ್ವಂತ ಬಲದಿಂದ ಅಧಿಕಾರಕ್ಕೆ ಬಂದ್ರೆ ಎಲ್ಲ ಸಮಸ್ಯೆ ಬಗೆಹರಿಯುತ್ತದೆ. ಕಾವೇರಿ, ಮಹದಾಯಿ ವಿವಾದ ಎಲ್ಲವೂ ಇತ್ಯರ್ಥವಾಗಲಿದೆ. ಜತೆಗೆ ರೈತರ ಸಾಲ ಸಂಪೂರ್ಣ ಮನ್ನಾ ಮಾಡುತ್ತೇವೆ ಎಂದರು. ಆಂಧ್ರಪ್ರದೇಶದ ಚಂದ್ರಬಾಬು ನಾಯ್ಡು ಎನ್‌ಡಿಎ ಮೈತ್ರಿಯಿಂದ ಹೊರ ಬರುತ್ತೇವೆ ಎಂದು ಹೇಳಿದ ಕೂಡಲೇ, ಅವರಿಗೆ ಹೆಚ್ಚಿನ ಅನುದಾನ ನೀಡಿದರು. ಹೀಗಾಗಿ ಪ್ರಾದೇಶಿಕ ಪಕ್ಷಗಳು ಬಲಗೊಳ್ಳುವ ಅವಶ್ಯಕತೆ ಇದೆ. ಈ ನಿಟ್ಟಿನಲ್ಲಿ ರಾಜ್ಯದ ಜನ ಜೆಡಿಎಸ್‌ಗೆ ಬೆಂಬಲ ನೀಡಬೇಕು ಎಂದು ಹೇಳಿದರು.

# ದಕ್ಷಿಣೆಯೆಂಬ ಭಿಕ್ಷೆಯೇ ನಮ್ಮ ಆದಾಯ ಮಸಣ ಕಾರ್ಮಿಕರಿಗೆ ಪ್ಯಾಕೇಜ್ ಘೋಷಿಸಿ





ಬಳ್ಳಾರಿ

ಮಸಣ ಕಾರ್ಮಿಕರನ್ನು ಸ್ಥಳೀಯ ಸಂಸ್ಥೆಗಳ ನೌಕರರನ್ನು ಮತ್ತು ಜೀವನದ ನೆರವಿಗಾಗಿ ಮಸಣ ಕಾರ್ಮಿಕರ ಪ್ಯಾಕೇಜ್ ಘೋಷಿಸಿ ಎಂದು ಸಿದ್ದರಾಮಯ್ಯ ಅವರಿಗೆ ಕರ್ನಾಟಕ ರಾಜ್ಯ ಮಸಣ ಕಾರ್ಮಿಕ ಸಂಘದ ಸಂಚಾಲಕ ಯು.ಬಸವರಾಜ ಒತ್ತಾಯಿಸಿದರು.

ನಗರದ ಪತ್ರಿಕಾ ಭವನದಲ್ಲಿ ಮಾತನಾಡಿದ ಅವರು ಮಸಣ ಕಾರ್ಯದಲ್ಲಿ ಸೇವೆಯಲ್ಲಿ ತೊಡಗಿರುವ ಕನಿಷ್ಠ ಊರಿಗೊಬ್ಬರಂತೆ ಗ್ರಾಮ ಪಂಚಾಯ್ತಿ ಅಥವಾ ನಗರ ಮತ್ತು ಪಟ್ಟಣಗಳ ಸ್ಥಳೀಯ ಸಂಸ್ಥೆಗಳ ನೌಕರರೆಂದು ನೇಮಿಸಿಕೊಳ್ಳಲು, ಕುಣಿ ಅಗೆಯುವ ಕೆಲಸವನ್ನು ಉದ್ಯೋಗ ಖಾತ್ರಿ ಕೆಲಸವೆಂದು ಪರಿಗಣಿಸಿ, ವೇತನ ನೀಡಲು 2017-18ರ ಬಜೆಟ್‌ನಲ್ಲಿ ಪರಿಹರಿಸಲು ಒತ್ತಾಯಿಸಿದರು. 25 ಸಾವಿರಕ್ಕೂ ಅಧಿಕ ಮಸಣಗಳಲ್ಲಿ ಕಾರ್ಯ ನಿರ್ವಹಿಸುವ ಕುಟುಂಬಗಳಿವೆ ಅಂದಾಜು ಸುಮಾರು 10-15 ಲಕ್ಷ ಸಂಖ್ಯೆಯಲ್ಲಿದೆ ಎಂದು ತಿಳಿಸಿದರು.

ದಕ್ಷಿಣೆಯೆಂಬ ಭಿಕ್ಷೆಯೇ ಆದಾಯ, ಗ್ರಾಮಗಳ ಬರಗಾಲ ಪರಿಹಾರಕ್ಕೂ ಉಚಿತವಾಗಿ ಕಾಡು ಸೋಸಬೇಕು. ಸಾರ್ವಜನಿಕ ಸೇವೆ, ಸರ್ವಜನಿಕ ನೌಕರರೆಂದು ಸರಕಾರ ಪರಿಗಣಿಸದಿರುವುದು ಬೇಸರದ ವಿಚಾರ, ಭೂಮಿ ಇಲ್ಲಾ, ಕೂಲಿ ಕೆಲಸವೂ ಸಿಗುತ್ತಿಲ್ಲ, ತಲಾ ಆದಾಯ ಹತ್ತು ರೂಪಾಯಿ ಮಾತ್ರ, ಜಾತಿ ದೌರ್ಜನ್ಯ ಹೊರಬರುವುದು ಹಾಗೂ ಬದುಕುವುದು ಹೇಗೆ ಎಂದು ಪ್ರಶ್ನೆಯನ್ನು ಮಾಡಿದರು. ಪ್ರತಿ ಸಾರ್ವಜನಿಕ ಮಸಣಕ್ಕೆ ಒಬ್ಬರಂತೆ ಮಸಣ ಕಾರ್ಮಿಕರನ್ನು ಸ್ಥಳೀಯ ಸಂಸ್ಥೆಗಳ ಮಸಣ ನಿರ್ವಾಹಕ ನೌಕರರ ನೇಮಿಸಿ,

>>> 2 ನೇ ಪುಟಕ್ಕೆ

# ಮೋದಿಗೂ ಅನ್ನಭಾಗ್ಯಕ್ಕೂ ಸಂಬಂಧವಿಲ್ಲ

## ಅನ್ನಭಾಗ್ಯದ ರಾಯಭಾರಿ ಸಿಎಂ ಸಿದ್ದರಾಮಯ್ಯ





ದಾವಣಗೆರೆ

ಹಸಿವು ಮುಕ್ತ ಕರ್ನಾಟಕ್ಕಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಜಾರಿಗೆ ತಂದಿರುವ ಅನ್ನಭಾಗ್ಯ ಯೋಜನೆಗೂ ಬಿಜೆಪಿಗೂ ಯಾವುದೇ ಸಂಬಂಧವಿಲ್ಲ ಎಂದು ಕೆಪಿಸಿಸಿ ಕಾರ್ಯದರ್ಶಿ ಡಿ.ಬಸವರಾಜ ತಿಳಿಸಿದ್ದಾರೆ.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಇತ್ತೀಚೆಗೆ ನಗರಕ್ಕೆ ಭೇಟಿ ನೀಡಿದ್ದ ಕೇಂದ್ರ ಮಾನವ ಸಂಪನ್ಮೂಲ ಅಭಿವೃದ್ಧಿ ಖಾತೆ ಸಚಿವ ಪ್ರಕಾಶ್ ಜಾವಡೇಕರ್ ರಾಜ್ಯ ಸರ್ಕಾರ ನೀಡುತ್ತಿರುವ ಅನ್ನ ಭಾಗ್ಯ ಅಕ್ಕಿ ಕೇಂದ್ರ ಸರ್ಕಾರದ ಮೋದಿ ಕೊಡುಗೆಯೇ ಹೊರತು, ಸಿದ್ದರಾಮಯ್ಯ ಅವರದ್ದಲ್ಲ ಎಂದಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅನ್ನಭಾಗ್ಯ ಯೋಜನೆ ಜಾರಿಗೆ ಮುಂದಾದ ಸಂದರ್ಭದಲ್ಲಿ ಗಲಾಟೆ ಮಾಡಿದ್ದ, ಜನರು ಸೋಮಾರಿಗಳಾಗುತ್ತಾರೆ ಎಂದು ಟೀಕಿಸುತ್ತಿದ್ದ ಬಿಜೆಪಿಯವರು ಈಗ ಅನ್ನ ಭಾಗ್ಯ ನಮ್ಮದು ಎಂಬುದಾಗಿ ಹಸಿ ಸುಳ್ಳು ಹೇಳುತ್ತಿರುವುದು ಅತ್ಯಂತ ಖಂಡನೀಯ ಎಂದು ಅಸಮಾಧಾನ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಸರ್ಕಾರ ಅಸ್ತಿತ್ವಕ್ಕೆ ಬಂದ 1 ಗಂಟೆಯಲ್ಲಿಯೇ ಮುಖ್ಯಮಂತ್ರಿ ಸಿದ್ದರಾಮಯ್ಯನವರು ಅನ್ನ ಭಾಗ್ಯ ಯೋಜನೆ ಘೋಷಿಸಿದ್ದರು. ಈ ಯೋಜನೆ ಜಾರಿಗೆ ಬಂದು ಒಂದು ವರ್ಷದ ಹದಿಮೂರು ದಿನಗಳ ನಂತರ ಪ್ರಧಾನಿ ಮೋದಿ ಸರ್ಕಾರ ಅಧಿಕಾರಕ್ಕೆ ಬಂದಿದೆ. ಆದ್ದರಿಂದ ಮೋದಿ ಅನ್ನಭಾಗ್ಯ ಆಗಲು ಹೇಗೆ ಸಾಧ್ಯ? ಉಚಿತ ಅಕ್ಕಿ ನೀಡುತ್ತಿರುವ ಅನ್ನಭಾಗ್ಯ ಯೋಜನೆ ಮೋದಿಯವರದ್ದೇಯಾದರೆ, ದೇಶದ 19 ರಾಜ್ಯಗಳಲ್ಲಿ ಬಿಜೆಪಿ ಆಡಳಿತ ನಡೆಸುತ್ತಿದೆ. ಆ ರಾಜ್ಯಗಳಲ್ಲಿ ಏಕೆ ಈ ಯೋಜನೆ ಜಾರಿಯಲ್ಲಿಲ್ಲ ಎಂದು ಪ್ರಶ್ನಿಸಿದರು.

ಕೇಂದ್ರದಲ್ಲಿ 10 ವರ್ಷಗಳ ಕಾಲ ಅಧಿಕಾರ ನಡೆಸಿದ ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರ ಆಹಾರ ಭದ್ರತಾ ಯೋಜನೆಯನ್ನು ಜಾರಿಗೆ ತಂದಿರುವುದ್ದರ ಪರಿಣಾಮ ದೇಶದ ಶೇ.67 ರಷ್ಟು ಜನರಿಗೆ ಪಡಿತರ ವ್ಯವಸ್ಥೆಯಲ್ಲಿ ಆಹಾರ ಸಾಮಗ್ರಿಗಳು ದೊರೆಯುತ್ತಿದೆ. ಅಲ್ಲದೆ, ಇಂದು ಹೆಚ್ಚು ಜನಪ್ರಿಯತೆ ಪಡೆದಿರುವ ಮಾಹಿತಿ ಹಕ್ಕು ಕಾಯ್ದೆ, ಆರ್‌ಟಿಇ, ನರೇಗಾ ಸೇರಿದಂತೆ ಹಲವು ಜನಪರ

>>> 2 ನೇ ಪುಟಕ್ಕೆ

## ಸಚಿವ ಹೆಚ್.ಆಂಜನೇಯ ಪ್ರತಿಪಾದನೆ

# ಬಸವಣ್ಣ ಎಲ್ಲರೂ ಪೂಜಿಸುವ ಶ್ರೇಷ್ಠದಾರ್ಶನಿಕ

ಚಿತ್ರದುರ್ಗ

ಹನ್ನೆರಡನೆ ಶತಮಾನದಲ್ಲಿಯೇ ಅಸಮಾನತೆಗಾಗಿ ಹೋರಾಡಿದ ಮಹಾನ್ ಮಾನವತಾವಾದಿ ಬಸವಣ್ಣನವರನ್ನು ಎಲ್ಲಾ ಜಾತಿಯವರು ಪೂಜಿಸಬೇಕು ಎಂದು ಸಮಾಜ ಕಲ್ಯಾಣ ಸಚಿವರು ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಹೆಚ್.ಆಂಜನೇಯ ತಿಳಿಸಿದರು. ಜಿಲ್ಲಾಡಳಿತ, ಜಿ.ಪಂ., ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ನಗರಸಭೆ ಸಂಯುಕ್ತಾಶ್ರಯದಲ್ಲಿ ತ.ರಾ.ಸು.ರಂಗಮಂದಿರದಲ್ಲಿ ಮಂಗಳವಾರ ನಡೆದ ಮಾದಾರ ಚನ್ನಯ್ಯ, ಡೋಹರ ಕಕ್ಕಯ್ಯ, ಸಮಗಾರ ಹರಳಯ್ಯ, ಮಾದಾರ ದೂಳಯ್ಯ, ಉರಿಲಿಂಗಪೆದ್ದಿ ಇನ್ನು ಮೊದಲಾದ ದಲಿತ ವಚನಕಾರರ ಜಯಂತಿಯನ್ನು ಉದ್ಘಾಟಿಸಿ ಮಾತನಾಡಿದರು.

900 ವರ್ಷಗಳ ಹಿಂದೆ ಹಿಂದುಳಿದವರು ದಲಿತ ವಚನಕಾರರನ್ನು ಒಂದೆಡೆ ಸೇರಿಸಿ ಎಲ್ಲರನ್ನು ಒಗ್ಗೂಡಿಸಿ ಸಮ ಸಮಾಜ ನಿರ್ಮಾಣಕ್ಕೆ ಹೆಚ್ಚಿನ ಒತ್ತು ನೀಡಿದ ಬಸವಣ್ಣನವರು ಚಳುವಳಿ ಮಾಡದಿದ್ದರೆ ಅಸ್ಪೃಶ್ಯರ ಸ್ಥಿತಿ ಇಂದಿಗೂ ಶೋಚನೀಯವಾಗಿರುತ್ತಿತ್ತು. ಅವರ ಸಮಾನತೆ ತತ್ವಸಿದ್ಧಾಂತ ಇಂದು ಎಲ್ಲರಿಗೂ ದಾರಿದೀಪವಾಗಿದೆ ಎಂದು ಹೇಳಿದರು.

ಸಮಾಜದಲ್ಲಿ ಶೋಷಣೆ, ದಬ್ಬಾಳಿಕೆಗೆ ಒಳಗಾಗಿದ್ದ ಸಮುದಾಯಗಳಿಗೆ ಅಂಬೇಡ್ಕರ್ ಶಕ್ತಿ ತುಂಬಿದಿದ್ದರು.ಹಾಗೆಯೇ

ದಾವಣಗೆರೆಯ ನಿವೃತ್ತ ಪ್ರಾಧ್ಯಾಪಕ ಹಂಪಣ್ಣ ಉಪನ್ಯಾಸ ನೀಡಿ ಹನ್ನೆರಡನೆ ಶತಮಾನದಲ್ಲಿ ಹಿಂದುಳಿದ ದಲಿತ ವಚನಕಾರರು ಬಸವಣ್ಣನವರಿಗೆ ಸ್ಫೂರ್ತಿಯಾಗಿದ್ದರು. ಕೆಳ ವರ್ಗದ ದಲಿತ ವಚನಕಾರರು ಶರಣ ಶರಣೆಯರಿಗೆ ಬಸವಣ್ಣನವರು ಮಹತ್ವ ಕೊಟ್ಟವರು. ಜಾತಿ ಸಮೀಕರಣವನ್ನು ಮೊಟ್ಟ ಮೊದಲಿಗೆ ಮಾಡಿ ವೈಚಾರಿಕ, ಸಾಮಾಜಿಕ ಕ್ರಾಂತಿ ನಡೆಸಿ ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹ ಕೊಟ್ಟವರು ಎಂದು ನೆನೆದರು.

ಕಾಳವ್ವೆ ಮೊಟ್ಟಮೊದಲ ದಲಿತ ವಚನಗಾರ್ತಿ, ಉರಿಲಿಂಗಪೆದ್ದಿ ದೊಡ್ಡ ವಚನಗಾರ್ತಿ. ಮಾದಾರ ದೂಳಯ್ಯನಿಗೆ ಶಿವನೇ ಪ್ರತ್ಯಕ್ಷನಾದರೂ ಕಾಯಕಕ್ಕೆ ಒತ್ತು ಕೊಟ್ಟವನು ಎಂದು ಗುಣಗಾನ ಮಾಡಿದರು.

ಸಂಸದ ಬಿ.ಎನ್.ಚಂದ್ರಪ್ಪ, ಜಿಲ್ಲಾಧಿಕಾರಿ ವಿ.ವಿ.ಜೋತ್ಸ್ನ, ಜಿ.ಪಂ.ಅಧ್ಯಕ್ಷೆ ಸೌಭಾಗ್ಯ ಬಸವರಾಜನ್, ಲಿಡ್ಕರ್ ಚೇರ್ಮನ್ ಓ.ಶಂಕರ್ ನಗರಸಭೆ ಅಧ್ಯಕ್ಷ ಹೆಚ್. ಎನ್.ಮಂಜುನಾಥಗೊಪ್ಪೆ, ಅಪರ ಜಿಲ್ಲಾಧಿಕಾರಿ ಸಂಗಪ್ಪ, ಉಪವಿಭಾಗಾಧಿಕಾರಿ ವಿಜಯಕುಮಾರ್, ತಹಶೀಲ್ದಾರ್ ಮಲ್ಲಿಕಾರ್ಜುನ, ನಗರಸಭೆ ಪೌರಾಯುಕ್ತ ಚಂದ್ರಪ್ಪ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕರು ಇದ್ದರು.



## ಜಾನುವಾರು ಮಾರುಕಟ್ಟೆ ಕಾಮಗಾರಿಗೆ ಶಂಕುಸ್ಥಾಪನೆ



ಹಾವೇರಿ

ದೇಶಕ್ಕೆ ಅನ್ನದಾತ ರೈತರ ಹಿತಾಸಕ್ತಿ ಕಾಪಾಡಲು ಹಾಗೂ ರೈತರು ಬೆಳೆದ ಬೆಳೆಗಳನ್ನು ಮಾರುಕಟ್ಟೆಗೆ ಬಂದಾಗ ಅವರಿಗೆ ಮೂಲಭೂತ ಸೌಲಭ್ಯ ಒದಗಿಸಲು ಸರ್ಕಾರ ಬದ್ಧವಾಗಿದೆ ಎಂದು ಸರ್ಕಾರದ ಜವಳಿ ಹಾಗೂ ಮುಜರಾಯಿ ಸಚಿವ ಮತ್ತು ಜಿಲ್ಲಾ ಉಸ್ತುವಾರಿ ಸಚಿವ ರುದ್ರಪ್ಪ ಲಮಾಣಿ ಹೇಳಿದರು.

ನಗರದ ಜಾನುವಾರು ಮಾರುಕಟ್ಟೆ ಪ್ರಾಗಂಣದಲ್ಲಿ ಅಂದಾಜು 346 ಲಕ್ಷ ರೂ ಗಳ ವಿವಿಧ ಕಾಮಗಾರಿ ಅಭಿವೃದ್ಧಿ ಕಾಮಗಾರಿಗಳ ಉದ್ಘಾಟನೆ ಹಾಗೂ ಶಂಕು ಸ್ಥಾಪನೆ ನೆರವೇರಿಸಿ ಮಾತನಾಡಿದರು.

ರೈತರಿಗೆ ಅನುಕೂಲವಾಗುವ ರಸ್ತೆಗಳ ನಿರ್ಮಾಣ ಮಾಡಲು ಗ್ರಾಮ ಪಂಚಾಯತಿಯ ನರೇಗಾ ಅಡಿಯಲ್ಲಿ ನಮ್ಮ ಹೊಲ ನಮ್ಮ ರಸ್ತೆಯ ನಿರ್ಮಿಸಿಕೊಳ್ಳಲು ಅವಕಾಶವಿದೆ. ರೈತರ ಬಗ್ಗೆ ಕಾಳಜಿ ಇದ್ದುದ್ದರಿಂದ ನಮ್ಮ ಸರ್ಕಾರ ರೈತರ 50 ಸಾವಿರ ರೂ ಗಳನ್ನು ಸಹಕಾರಿ ಬ್ಯಾಂಕಿನಲ್ಲಿರುವ ಸಾಲಮನ್ನಾ ಮಾಡಿದೆ ಮುಂದೆ ಮಾರುಕಟ್ಟೆ ಅಭಿವೃದ್ಧಿಗೆ ಬೇಕಾದ ಅನುದಾನವನ್ನು ಶೀಘ್ರ ತೋಟಗಾರಿಕೆ ಹಾಗೂ ಕೃಷಿ ಮಾರುಕಟ್ಟೆ ಸಚಿವ ಎಸ್ ಎಸ್ ಮಲ್ಲಿಕಾರ್ಜುನ ಬೇಟಿ ಮಾಡಿ ಚರ್ಚಿಸಿ ಎಪಿಎಂಸಿಗೆ ಹೆಚ್ಚಿನ ಅನುದಾನ ತರಲು ಮುಂದಾಗುತ್ತೇನೆ ಎಂದರು.

ಈ ಮೂದಲು ಮಾತನಾಡಿದ ಸಂಸದ ಶಿವಕುಮಾರ ಉದಾಸಿ ಕೇಂದ್ರ ಸರ್ಕಾರ ಟಮೋಟ ಆಲೋಗಡ್ಡೆ ಹಾಗೂ ಈರುಳ್ಳಿಗೆ ಬೆಂಬಲ ಬೆಲೆ ನೀಡಲು ಮುಂದಾಗಿದೆ. ಎಪಿಎಂಸಿಯಲ್ಲಿ ತಂತ್ರಜ್ಞಾನದ ಹಾವಳಿ ಹೆಚ್ಚಾಗಿದೆ ರೈತರಿಗೆ ಮೋಸ ಆಗದಂತೆ ನೋಡಕೊಳ್ಳಲು ಆಧುನಿಕ ಯಂತ್ರಗಳ ಬರಲಿವೆ ಎಂದರು.

ಪ್ರಾಸ್ತಾವಿಕವಾಗಿ ಮಾತನಾಡಿದ ಎಪಿಎಂಸಿ ಅಧ್ಯಕ್ಷ ಮಲ್ಲಿಕಾರ್ಜುನ ಹಾವೇರಿ ಎಪಿಎಂಸಿ ಅಭಿವೃದ್ದಿಗೆ ಹೆಚ್ಚಿನ ಅನುದಾನದ ಅವಶ್ಯಕತೆ ಇದೆ. ಇಲ್ಲಿ ಇನ್ನೂ ಅನೇಕ ಸೌಲಭ್ಯಗಳು ಬೇಕಾಗಿವೆ. ಜಿಲ್ಲಾ ಮಟ್ಟದ ಕೆಡಿಪಿ ಸಭೆಯಲ್ಲಿ ನಮ್ಮ ಸದಸ್ಯರಿಗೆ ಅವಕಾಶ ನೀಡಿದರೆ ರೈತ ಸಮಸ್ಯೆಗಳನ್ನು ಚರ್ಚಿಸಲು ಅನುಕೂಲವಾಗುತ್ತದೆ ಎಂದು ಹೇಳಿದರು.

ಸದಸ್ಯರಾದ ರುದ್ರೇಶ ಚಿನ್ನಣ್ಣನವರ ರೈತರ ಹಲವಾರು ಸಮಸ್ಯೆಗಳನ್ನು ಬಗೆಹರಿಸುವಂತೆ ಒತ್ತಾಯಿಸಿದರು. ಹುಕ್ಕೇರಿಮಠದ ಸದಾಶಿವ ಮಹಾಸ್ವಾಮಿಗಳು ಕಾರ್ಯಕ್ರಮದ ಸಾನಿಧ್ಯ ವಹಿಸಿ ಆರ್ಶಿವಚನ ನೀಡಿದರು. ನಂತರ ಗಣ್ಯಮಾನ್ಯರನ್ನು ಸನ್ಮಾನಿಸಲಾಯಿತು.

ಈ ಸಂದರ್ಭದಲ್ಲಿ ನಗರಸಭೆ ಅಧ್ಯಕ್ಷರಾದ ಶ್ರೀಮತಿ ಪಾರ್ವತೆಮ್ಮ ಹಲಗಣ್ಣನವರ. ಸೇರಿದಂತೆ ಎಪಿಎಂಸಿ ಸದಸ್ಯರು ಹಾಗೂ ಕೃಷಿ ಉತ್ಪನ್ನ ಮಾರುಕಟ್ಟೆ ಅಧಿಕಾರಿ ವರ್ಗದವರು ಇತರರು ಹಾಜರಿದ್ದರು.